ಡೆಪ್ಯೂಟಿ ಚೀಫ್ ಮಿನಿಷ್ಟರ್ ಹಿಂದೆ ಹೇಳಿದ್ದರು. ಅದು ಬಸ್ಸಗಳು ಯಾವ ತರಹ ಹೋಗುತ್ತದೆ ಎಂದರೆ ನೋಡುವುದಕ್ಕೆ ಆಗುವುದಿಲ್ಲ. ಈಗ ನಮ್ಮಲ್ಲಿ ಟ್ರಾಫಿಕ್ ಎಷ್ಟು ಜಾಸ್ತಿಯಾಗಿದೆ ಎಂದರೆ ನೂರು ಪರ್ಸೆಂಟ್ ಜಾಸ್ತಿಯಾಗಿದೆ. The traffic police Station is essential for Channapatna.

ಅದಕ್ಕೆ ಈಗ ಹೊಸದಾಗಿ ಸ್ಕಾಂಕ್ಷನ್ ಮಾಡುತ್ತಿದ್ದಾರೆ, ಆದ್ದರಿಂದ ಅದನ್ನು ಕನ್ಸಿಡರ್ ಮಾಡಿ ಎಂದು ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಸಭಾಪತಿಯವರೇ, ಈಗ ಚನ್ನಪಟ್ಟಣ ನಗರದಲ್ಲಿ 2 ಪೋಲೀಸ್ ಸ್ಟೇಷನ್ ಇದೆ. ಆ ಎರಡರಲ್ಲಿ ಒಂದು ನಗರ ಮತ್ತು ಚನ್ನಪಟ್ಟಣ ಪೂರ್ವದಲ್ಲಿ ಇದೆ. ಈ ಠಾಣೆಗಳಿಗೆ ಒಟ್ಟು 3 ಎಸ್ಐಗಳು, 3 ಎಎಸ್ಐಗಳು, 20 ಹೆಚ್ಸಿಗಳು 68 ಪಿಸಿಗಳ ಬಲ ಕೂಡ ಜಾಸ್ತಿ ಮಾಡಿದ್ದೇವೆ. ಏಕೆಂದರೆ ಹೆಚ್ಚು ಸಂಖ್ಯೆ ಇರಬೇಕು ಎಂದು ಮಾಡಿದ್ದೇವೆ. ನಂತರ 94-95ನೇ ಸಾಲಿನಲ್ಲಿ ಕೂಡ ಪುನಃ ಒಂದು ಎಸ್ಐ, ಎಎಸ್ಐ ಹುದ್ದೆಗಳನ್ನು ಕೂಡ ಚನ್ನಪಟ್ಟಣನಗರದ ಪೋಲೀಸ್ ಸ್ಟೇಷನ್‌ಗೆ ಕೊಡುತ್ತಿದ್ದೇವೆ. ಎಂದರೆ ಈ ಪೋಲೀಸ್ ಸ್ಟೇಷನ್ನೆ ಏನು ಸಿಬ್ಬಂದಿ ಕೊರತೆ ಇತ್ತು ಅದನ್ನು ನಾವು ನೀಗಿಸಿಬಿಟ್ಟಿದ್ದೇವೆ. ಆದುದರಿಂದ ನಮ್ಮ ಪೋಲೀಸ್ ಇಲಾಖೆ ಅಭಿಪ್ರಾಯವನ್ನು ಕೇಳಿದರೆ ಸಮರ್ಪಕವಾಗಿ ಇವರು ನಿರ್ವಹಿಸಿದ್ದಾರೆ ಎಂದು ಹೇಳುತ್ತಾರೆ. ಅನೇಕ ಬಾರಿ ತಾವು ನನ್ನ ಜೊತೆಯಲ್ಲಿ ಮಾತನಾಡಿದ್ದೀರಿ. ಮತ್ತು ಆಕ್ಸಿಡೆಂಟ್ಸ್ ಬಹಳ ಆಗುತ್ತಿರುವುದರಿಂದ 94-95ನೇ ಸಾಲಿನಲ್ಲಿ ಒಂದು ಸಂಚಾರಿ ಘಟಕವನ್ನು ನಾವು ಮಾಡುತ್ತೇವೆ.

**ಬೆಂಗಳೂರಿನಲ್ಲಿರುವ ಸಾರಾಯಿ ಅಂಗಡಿಗಳು**

14 - ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಬೆಂಗಳೂರು ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಆದರಲ್ಲೂ ವಿಶೇಷವಾಗಿ ಕಿಕ್ಕಿರಿದ ಜನಸಂದಣಿ ಪ್ರದೇಶಗಳಲ್ಲಿ ಪರವಾನಿಗೆ ಹೊಂದಿದ ಸಾರಾಯಿ ಅಂಗಡಿಗಳನ್ನು ಸ್ಥಾಪಿಸಿರುವುದು ಹಾಗೂ ಖಾಸಗಿ ಆಸ್ತಿಗಳಲ್ಲಿ ನಡೆಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

*ಆ) ನಿವಾಸಗಳ ಪ್ರದೇಶಗಳಲ್ಲಿ, ವರ್ಕ್‌ಶಾಪ್, ವಿದ್ಯಾಸಂಸ್ಥೆಗಳು, ಆಸ್ಪತ್ರೆಗಳು, ಕೊಳಚೆ ಪ್ರದೇಶಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪ್ರದೇಶಗಳು ಸರ್ಕಾರಿ ಹಾಗೂ ಅರೆ ಸರ್ಕಾರಿ ಮತ್ತು ಸ್ಥಳೀಯ ಸಂಸ್ಥೆಗಳ ಕಛೇರಿಗಳ ಸಮೀಪದ ಸ್ಥಳಗಳಲ್ಲಿ ಅಂತಹ ಅಂಗಡಿಗಳನ್ನು ಸ್ಥಾಪಿಸುವಾಗ ಅನೇಕ ಪ್ರಕರಣಗಳಲ್ಲಿ ಸರ್ಕಾರಿ ನಿಯಮಾವಳಿಗಳನ್ನು ಉಲ್ಲಂಘಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

*ಇ) ಹಾಗಿದ್ದಲ್ಲಿ, ಅಂತಹ ಅಂಗಡಿಗಳನ್ನು ಗುರುತಿಸಿ ನಿಯಮಾವಳಿಯ ಪರಿಮಿತಿಯೊಳಗೆ ಬರುವ ಸ್ಥಳಗಳಿಗೆ ಸ್ಥಳಾಂತರಿಸಲು ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೇ?*

*ಈ) ಸ್ಥಳೀಯ ಜನತೆಗೆ ಆಗುವ ಅನಾನುಕೂಲ ಹಾಗೂ ತೊಂದರೆಗಳನ್ನು ತಡೆಗಟ್ಟುವುದಕ್ಕಾಗಿ ಅಬಕಾರಿ ಗುತ್ತಿಗೆದಾರರಿಗಾಗಿ, ಮಾರಾಟಗಾರರಿಗಾಗಿ ರಾಜ್ಯ ಸರ್ಕಾರದ ಹಾಗೂ ಪುರಸಭೆಗಳ ಹಾಗೂ ಸ್ಥಳೀಯ ಪ್ರಾಧಿಕಾರಗಳ ಜಾಗಗಳಲ್ಲಿ ಅಂತಹ ಅಂಗಡಿಗಳಿಗೆ ಪರವಾನಿಗೆ ನೀಡಲು ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೇ?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಹೌದು.

ಆ) ಹೌದು. ಕೆಲವು ಪ್ರಕರಣಗಳಲ್ಲಿ.

ಇ) ಆಕ್ಷೇಪಣಾ ರಹಿತ ಸ್ಥಳಗಳಿಗೆ ಇಂತಹ ಅಂಗಡಿಗಳನ್ನು ಸ್ಥಳಾಂತರಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಈ) ಇದನ್ನು ಪರಿಶೀಲಿಸಲಾಗುವುದು.

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಅಧ್ಯಕ್ಷರೇ, ನಾನು ಬಹಳ ಮುಖ್ಯವಾಗಿ ಮೂಲಭೂತವಾದ ಪ್ರಶ್ನೆಗಳನ್ನು ಹಾಕಿದ್ದೆ. ಆದರೆ ಇವರು ಬಹಳ ಕ್ಯಾಶುಯಲ್ ಆಗಿ ರಿಪ್ಲೈ ಮಾಡಿದ ಹಾಗೆ ಕಾಣುತ್ತದೆ. ಮಾನ್ಯ ಮುಖ್ಯಮಂತ್ರಿಗಳಿಗೆ ಇದರಿಂದ ಜನರಿಗೆ ಎಷ್ಟು ತೊಂದರೆ ಆಗುತ್ತಿದೆ ಎಂದು ಗೊತ್ತಿದೆ.

ಸುಮಾರು 40-50 ವರ್ಷಗಳಿಂದ ಏನು ರೂಲ್ಸ್‌ಗಳನ್ನು ಹಾಕಿಕೊಂಡಿದ್ದಾರೆ ಅದರಲ್ಲಿ ಯಾವ ರೀತಿಯ ಬದಲಾವಣೆ ಆಗಿಲ್ಲ. ಪ್ರತಿನಿಧಿಗಳ ಒತ್ತಡ ಎಲ್ಲಿ ಬರುತ್ತದೆ ಅಂತಹ ಕೆಲವೇ ಕಡೆಗಳಲ್ಲಿ ಮಾತ್ರ ಸ್ಥಳಾಂತರ ಮಾಡುತ್ತಿದ್ದಾರೆ. ಇಲ್ಲಿ ಪ್ರಶ್ನೆ ಕೇಳಿದ ಮೇಲೆ ಇಂತಹ ಅಂಗಡಿಗಳನ್ನು ಸ್ಥಳಾಂತರಗೊಳಿಸಲು ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಸೋ ಮೋಟೋ ಸರ್ಕಾರ ಕ್ರಮ ಕೈಗೊಂಡಿದ್ದರ ಒಂದೆರಡು ಮಾಹಿತಿಯನ್ನು ಕೊಡುವುದಕ್ಕೆ ಸಾಧ್ಯವೇ? ಇಲ್ಲಿ ಕೇವಲ ಜನತೆಯ ಪ್ರತಿನಿಧಿಗಳು ಜನತೆಯು ಪೂರ್ತಿ ಒತ್ತಾಯ ತಂದಾಗ ಮಾತ್ರ ಒತ್ತಾಯಕ್ಕೆ ಮಣಿದು ಕೆಲವು ಬದಲಾವಣೆಗಳನ್ನು ಮಾಡಿದ್ದಾರೆಯೆ?

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಆತಂಕ ಮತ್ತು ಮಾನ್ಯ ಸದಸ್ಯರ ಒಂದು ವಿಚಾರವನ್ನು ಈಗಾಗಲೇ ನಾನು ಗ್ರಹಿಸಿದ್ದೇನೆ. ಅದಕ್ಕಾಗಿ ಅವರ ಹೋರಾಟದಿಂದಲೇ ಬಹಳ ವರ್ಷಗಳಿಂದ ಅದನ್ನು ವರ್ಗಾವಣೆ ಮಾಡಲಿಕ್ಕೆ ಆಗದೆ ಇರತಕ್ಕಂಥ ಕೆಲಸ ಏನಿತ್ತು, ಅದನ್ನು ಮಾಡಿದ್ದೇವೆ. ಹೋದ ಸಾರಿ ಮಾಡಿದ್ದೇವೆ ಈಗ .....

ಶ್ರೀ ವಾಟಾಳ್ ನಾಗರಾಜ್ : ನೀವು ಅವರು ಒಟ್ಟಿಗೆ ಸೇರಿದ್ದು ಒಂದು ಫೋಟೋ ಪತ್ರಿಕೆಯಲ್ಲಿ ಬಂದಿತ್ತು.

ಶ್ರೀ ಎಂ. ವೀರಪ್ಪ ಮೊಯಿಲಿ : ನಾವು ಯಾವಾಗಲೂ ಒಟ್ಟಿಗೆ ಇರುತ್ತೇವೆ. ಅವರು ಹಿರಿಯರು. ಈಗ ಇನ್ನು ಒಂದೆರಡು ಕಡೆ ನಾವು ನಿರ್ಣಯ ಮಾಡಿದ್ದೇವೆ. ತಿಮ್ಮರಾಯಪ್ಪ ಗಾರ್ಡನ್, ಮತ್ತೊಂದು ಕಬ್ಬನ್ ಪೇಟೆ ಅದು ಈಗಾಗಲೇ ವರ್ಗಾವಣೆ ಆಗಿದೆ. ಇನ್ನು ಬನಶಂಕರಿ ಮೊದಲನೆಯ ಹಂತ, ಮಾರುತಿ ಬಡಾವಣೆ ಇವೆರಡನ್ನು ವರ್ಗಾವಣೆ ಮಾಡುವುದಕ್ಕೆ ನಾವು ಈಗಾಗಲೇ ಸೂಚನೆ ಕೊಟ್ಟಿದ್ದೇವೆ. ಈಗ ಬೆಂಗಳೂರು ನಗರದ ಸಾರಾಯಿ ಕಾಂಟ್ರಾಕ್ಟ್ ಗುತ್ತಿಗೆ ಏನು ಇದೆ ಅದನ್ನು ರದ್ದು ಮಾಡಿದ್ದೇವೆ. ಈಗ ಸರ್ಕಾರದ ಸ್ವಾಧೀನ ಇರುವುದರಿಂದ ಪುನಃ ನಾವು ಪ್ರಾರಂಭ ಮಾಡುವುದಾಗಿ ಇದನ್ನು ರದ್ದು ಮಾಡಿ .....

ಶ್ರೀ ವಾಟಾಳ್ ನಾಗರಾಜ್ : ಇನ್ನು ಮೇಲೆ ನೀವೇ ಸಾರಾಯಿ ಅಂಗಡಿಗಳನ್ನು ನಡೆಸುತ್ತೀರೋ.

ಶ್ರೀ ಸಿ. ಬೈರೇಗೌಡ : ಕಾಗದದ ಮೇಲೆ ಮಾತ್ರ ರದ್ದು ಮಾಡಿದ್ದೀರಿ, ಬಹಳ ಚೆನ್ನಾಗಿದೆ.

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಅಧ್ಯಕ್ಷರೇ, ನಾನು ಕೇಳಿದ ಪ್ರಶ್ನೆಯನ್ನು ಮಾನ್ಯ ಮಂತ್ರಿಗಳು ಗಮನಿಸಿಲ್ಲ. ಪರವಾನಿಗೆ ಕೊಡುವ ಕಂಡಿಷನ್ ಏನಿದೆ ಅದು

ಬಹಳ ಹಲೆಯ ಕಾಲದಿಂದ ಬಂದಿರುವುದು. ನಗರದ ವ್ಯಾಪ್ತಿ ಬೆಳೆಯುತ್ತಿದೆ, ಜನಸಂಖ್ಯೆ ಬೆಳೆಯುತ್ತಿದೆ ಮತ್ತು ಜನಗಳ ಆಶೋತ್ತರಗಳು ಬಹಳವಾಗಿ ಬೆಳೆಯುತ್ತಿವೆ. ಅದಕ್ಕೆ ಅನುಗುಣವಾಗಿ ಈ ಕಾನೂನುಗಳನ್ನು ಮಾಡಬೇಕಾಗಿದೆ. ಪರವಾನಿಗೆಯನ್ನು ಕೊಡಕೂಡದು, ಕೊಡಬೇಕೆಂದು ಏನು ಕಾನೂನು ರೆವ್ಯೂ ಮಾಡಿದ್ದಾರೆ, ಅದನ್ನು ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಬಹಳ ಒಳ್ಳೆಯ ಸೂಚನೆ ಇದೆ, ಮುಂದೆ ಬರುವ ಅಬಕಾರಿ ವರ್ಷ ಪ್ರಾರಂಭವಾಗುವ ಮೊದಲು, ಅಧಿಸೂಚನೆಗಳನ್ನು ಕೊಡುವ ಮೊದಲು .....

ಶ್ರೀ ಸಿ. ಬೈರೇಗೌಡ : ಮೊದಲು ಅಂಗಡಿ ಹರಾಜು ಮಾಡುತ್ತಿದ್ದೀರಿ ಈಗ ಅದಕ್ಕೆ ಬದಲಾಗಿ ಷಾಪ್ಟೈಸ್ ಇದ್ದದ್ದು ಏರಿಯಾ ಎಂದು ಫಿಕ್ಸ್‌ಡಿದ್ದೀರಿ. ಆ ಏರಿಯಾದಲ್ಲಿ ಯಾರು ಬೇಕಾದರೂ ಎಷ್ಟು ಬೇಕಾದರೂ ಸಾರಾಯಿ ಮಾರಾಟ ಮಾಡಬಹುದು. ಸ್ವಲ್ಪ ದಯವಿಟ್ಟು ಅದನ್ನು ಗಮನದಲ್ಲಿಟ್ಟುಕೊಂಡು ತಾವು ಉತ್ತರವನ್ನು ಕೊಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಅದನ್ನು ಮುಂಬುವ ದಿವಸಗಳಲ್ಲಿ ಪುನಃ ಪರಿಶೀಲನೆ ಮಾಡಿ ಎಲ್ಲೆಲ್ಲಿ ಷಾಪ್ ಇರಬಾರದು ಇದರ ಬಗ್ಗೆ ತಮ್ಮ ಜೊತೆಯಲ್ಲಿ ನಮ್ಮ ಬೆಂಗಳೂರು ನಗರದ ಶಾಸಕರನ್ನು ಕೂಡ ಕರೆಯಿಸಿ ಸಮಾಲೋಚನೆಗಳನ್ನು ಮಾಡಿ ನಮ್ಮ ಎಕ್ಸೈಸ್ ಕಮೀಷನರ್‌ನ್ನು ಕೂರಿಸಿ ಎಲ್ಲೆಲ್ಲಿ ಅದನ್ನು ಸಂಪೂರ್ಣ ಹತೋಟಿ ತರಬೇಕು ನಿಲ್ಲಿಸಬೇಕು ಎಂಬ ರೀತಿಯಲ್ಲಿ ನಾವು ವ್ಯಾಪಕವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಬೆಂಗಳೂರು ಮೈಸೂರು ನಡುವೆ ಪ್ರಯಾಣಿಕರಿಗೆ ಸೌಲಭ್ಯ**

112 - ಶ್ರೀ ಚಿಕ್ಕಮಾಧು (ಹುಣಸೂರು) : ಮಾನ್ಯ ಸಾರಿಗೆ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಎರಡು ಪ್ರಮುಖ ನಗರಗಳಾದ ಮೈಸೂರು ಬೆಂಗಳೂರು ನಡುವೆ ಪ್ರತಿನಿತ್ಯ ಓಡಾಡುತ್ತಿರುವ ಸಾರಿಗೆ ಸಂಸ್ಥೆ ಬಸ್ಸುಗಳೆಷ್ಟು ಅದರಲ್ಲಿ ಸಾಮಾನ್ಯ ಶೀಘ್ರ, ತಡೆರಹಿತ ಬಸ್ಸುಗಳ ಸಂಖ್ಯೆಗಳೇನು?*

ಆ) *ಈ ಎರಡು ಪ್ರಮುಖ ನಗರಗಳ ನಡುವೆ ಸಾರಿಗೆ ಸಂಸ್ಥೆಯ ಬಸ್ಸುಗಳಲ್ಲಿ ಪ್ರಯಾಣ ಮಾಡುತ್ತಿರುವ ಲಕ್ಷಾಂತರ ಪ್ರಯಾಣಿಕರುಗಳಿಗೆ ಮಾರ್ಗ ಮಧ್ಯದಲ್ಲಿ ಕುಡಿಯುವ ನೀರು, ಫಲಹಾರ, ಶೌಚಾಲಯ ಇನ್ನಿತರೆ ಯಾವುದೇ ರೀತಿಯ ವ್ಯವಸ್ಥೆ ಇಲ್ಲದೆ ಪ್ರಯಾಣಿಕರುಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಸಾರಿಗೆ ಸಂಸ್ಥೆಯು ಮೇಲ್ಕಂಡ ಯಾವುದೇ ರೀತಿಯ ವ್ಯವಸ್ಥೆ ಮಾಡದಿರುವುದು ಈ ಎರಡು ನಗರಗಳ ಮಾರ್ಗದ ಅಜು ಬಾಜುವಿನಲ್ಲಿ ಖಾಸಗಿಯವರು ಹಲವಾರು, ಅನಾರೋಗ್ಯ, ಅಶುಚಿತ ಆಶಿಸ್ತಿನ ಫಲಹಾರ ಮಂದಿರಗಳನ್ನು ತೆರೆದಿದ್ದು, ಸಾರಿಗೆ ಸಂಸ್ಥೆಯ ಪ್ರತಿಯೊಂದು ಬಸ್ಸು ಒಂದಲ್ಲ ಒಂದು ಈ ರೀತಿಯ ಫಲಹಾರ ಮಂದಿರಗಳ ಮುಂದೆ ನಿಂತು ಪ್ರಯಾಣಿಕರು ವಿಧಿಯಿಲ್ಲದೆ ಇಂತಹ ಅವ್ಯವಸ್ಥೆಯ ಫಲಹಾರ ಮಂದಿರಗಳಲ್ಲಿ ತಿಂಡಿ ತಿನಿಸು ತಿಂದು ತೊಂದರೆ ಪಡುತ್ತಿರುವುದಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಬಂದಿದ್ದರೆ ಈ ಬಗ್ಗೆ ಲಕ್ಷಾಂತರ ಪ್ರಯಾಣಿಕರ ಅನುಕೂಲಕ್ಕಾಗಿ ಇದುವರೆಗೆ ಕೈಗೊಂಡಿರುವ ಕ್ರಮಗಳೇನು ಹಾಗೂ ಈ ರೀತಿಯ ಕ್ರಮಗಳಿಂದ ಪ್ರಯಾಣಿಕರ ತೊಂದರೆಗಳು ಬಗೆ ಹರಿದಿವೆಯೇ?*